ಈ) ಹಾಗಿದ್ದಲ್ಲಿ ಪ್ರತಿನಿತ್ಯ ನೂರಾರು ವಾಹನಗಳು ಸೂಚಿಸುತ್ತಿರುವ ಈ ರಸ್ತೆಯನ್ನು ದುರಸ್ತಿ ಗೊಳಿಸಿ ಡಾಂಬರು ಹಾಕಲು ಜರೂರು ಕ್ರಮ ಕೈಗೊಳ್ಳಲು ಸಾಧ್ಯವೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಮತ್ತು ಆ) ಗ್ರಾಮಾಂತರ ರಸ್ತೆಗಳಿಗೆ ಡಾಂಬರು ಹಾಕುವುದನ್ನು ಹಣಕಾಸಿನ ಲಭ್ಯತೆ ಗನುಗುಣವಾಗಿ ಹಂತ ಹಂತವಾಗಿ ಮತ್ತು ರಸ್ತೆಯ ಉಪಯೋಗ, ವಾಹನ ಸಂಚಾರ, ಆ ಭಾಗದ ಹವಾಗುಣ ಮತ್ತು ಆರ್ಥಿಕ ಲಾಭಗಳನ್ನಾಧರಿಸಿ ತೆಗೆದುಕೊಳ್ಳಲಾಗುವುದು.

ಇ) ಈ ರಸ್ತೆಯ ಸ್ಥಿತಿ ಅಷ್ಟು ತೃಪ್ತಿಕರವಾಗಿಲ್ಲ. ದೊರಕುತ್ತಿರುವ ಅನುದಾನಕ್ಕನುಗುಣ ದುರಸ್ತಿಯನ್ನು ಕೈಗೊಳ್ಳಲಾಗುತ್ತಿದೆ.

ಈ) ಹಣಕಾಸಿನ ಲಭ್ಯತೆಗನುಗುಣವಾಗಿ ಇದನ್ನು ಪರಿಗಣಿಸಲಾಗುವುದು.

ತುಂಗಭದ್ರಾ ಅಣೆಕಟ್ಟಿನಲ್ಲಿ ಹೂಳು ತುಂಬಿಕೊಂಡಿರುವ ಬಗ್ಗೆ

೧೪೫೫. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಂಗಭದ್ರಾ ಅಣೆಕಟ್ಟಿನಲ್ಲಿ ಪ್ರತಿವರ್ಷವು ಹೂಳು ತುಂಬಿಕೊಂಡಿರುವುದರಿಂದ, ನೀರಿನ ಮಟ್ಟ ಇಳಿಮುಖವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ಪ್ರತಿವರ್ಷ ಹೂಳು ತುಂಬುವುದರಿಂದ ನೀರಿನ ಉಪಯುಕ್ತ ಶೇಖರಣೆ ಇಳಿಮುಖವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಜಲಾನಯನ ಪ್ರದೇಶದಲ್ಲಿ ಅರಣ್ಯ ಬೆಳೆಸುವುದು, ಕಾಂಟೂರ್ ಒಡ್ಡು ಕಟ್ಟುವುದು ಹಾಗೂ ಹಿರೇಹಳ್ಳ ಯೋಜನೆಯನ್ನು ನಿರೂಪಿಸಿರುವುದು.

ಅನಗವಾಡಿ ಹತ್ತಿರ ಸೇತುವೆಯ ನಿರ್ಮಾಣ

೧೪೫೬. ಶ್ರೀ ಬಾಬುರೆಡ್ಡಿ ವೆಂ. ತುಂಗಳ್ (ಬೀಳಗಿ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಂಬ್ಬಳ್ಳಿ ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಘಟಪ್ರಭಾ ನದಿಗೆ ಅಡ್ಡಲಾಗಿ ಅನಗವಾಡಿ ಹತ್ತಿರ ಬೃಹತ್ ಸೇತುವೆ ಕಟ್ಟಲು ಸರ್ಕಾರವು ಈಗಾಗಲೇ ನಿರ್ಣಯ ಕೈಕೊಂಡಿದೆಯೆ,

ಆ) ಹಾಗಿದ್ದಲ್ಲಿ, ಈ ಸೇತುವೆ ನಿರ್ಮಾಣದ ಬಗ್ಗೆ ಅಂದಾಜು ವೆಚ್ಚ ಹಾಗೂ ನೀಲಿ ನಕ್ಷೆ ಸಿದ್ಧವಾಗಿದೆಯೆ,

ಇ) ನಿರ್ಮಾಣ ಕಾರ್ಯದ ಟೆಂಡರ್ ಕರೆಯುವ ಬಗ್ಗೆ ಪೂರ್ವ ಸಿದ್ಧತೆಗಳೇನಾದರೂ ಮುಗಿದಿವೆಯೆ,

ಈ) ಹಾಗಿದ್ದಲ್ಲಿ, ಬರಗಾಲ ಕಾಮಗಾರಿಯಲ್ಲಿ ಜನರಿಗೆ ಕೆಲಸ ಕೊಡುವ ದೃಷ್ಟಿಯಿಂದ ಅದರ ನಿರ್ಮಾಣ ಕಾರ್ಯವನ್ನು ಈಗಲೇ ಕ್ರಮ ಕೈಕೊಳ್ಳಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಆಗಿದೆ.

ಇ) ಟೆಂಡರ್ ಕರೆಯುವ ಬಗ್ಗೆ ಪೂರ್ವ ಸಿದ್ಧತೆಗಳು ಮಾಡಲಾಗುತ್ತಿದೆ.

ಈ) ಬರಗಾಲ ಕಾಮಗಾರಿಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿಲ್ಲ.